# ಪುನೀತ್ ನಿಧನಕ್ಕೆ ಹೊರಟ್ಟಿ ತೀವ್ರ ಸಂತಾಪ

**ಹುಬ್ಬಳ್ಳಿ,ಅ.30:** ಕನ್ನಡದ ಚಿತ್ರರಂಗದ ಉದಯೋನ್ಮುಖ ನಾಯಕ ನಟ, ಪವರ್ ಸ್ಟಾರ್ ಪುನೀತ ರಾಜಕುಮಾರ ಅವರ ಅಕಾಲಿಕ ನಿಧನಕ್ಕೆ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ತೀವ್ರ ಸಂತಾಪ ಸೂಚಿಸಿದ್ದಾರೆ.

ಒಬ್ಬ ಬಾಲ ನಟನಾಗಿ ಕನ್ನಡ ಚಿತ್ರರಂಗ ಪ್ರವೇಶಿಸಿದ ಪುನೀತ್ ರಾಜಕುಜಮಾರ್ ಅವರು, ಡಾ.ರಾಜಕುಮಾರ ಅವರಂತೆಯೇ ಕನ್ನಡ ಚಿತ್ರರಂಗದಲ್ಲಿ ಕೋಟ್ಯಾಂತರ ಅಭಿಮಾನಿಗಳನ್ನು ಹೊಂದಿದ್ದರು. ಬಾಲ ನಟನಾಗಿ ರಾಜಕುಮಾರ ಅಭಿನಯದ 'ಬೆಟ್ಟದ ಹೂವು' ಚಲನಚಿತ್ರ ರಾಷ್ಟ್ರ ಪ್ರಶಸ್ತಿ ಪಡೆದು ಇಡೀ ಕನ್ನಡ ಚಿತ್ರರಂಗದ ಗಮನ ಸೆಳೆದದ್ದು ಇನ್ನೂ ಜನಮಾನಸದಲ್ಲಿ ಉಳಿದಿದೆ.

ನಾಯಕ ನಟನಾಗಿ ಪುನೀತ್ ರಾಜಕುಮಾರ್ ಅಭಿನಯಿಸಿದ್ದ 'ವೀರ ಕನ್ನಡಿಗ' 'ರಾಜಕುಮಾರ' 'ನಟಸಾರ್ವಭೌಮ' ಸೇರಿದಂತೆ ಅನೇಕ ಚಿತ್ರಗಳಲ್ಲಿಯ ಅವರ ಅದ್ಭುತ ನಟನಾ ಪ್ರತಿಭೆ ಕನ್ನಡಿಗರ ಮನಸೂರೆಗೊಂಡಿತ್ತು. ಪುನೀತ ರಾಜಕುಮಾರ್ ಅವರ ಸಾಮಾಜಿಕ ಕಳಕಳಿ, ನೊಂದವರಿಗೆ ನೆರವು ನೀಡುವ ಮಾನವೀಯ ಗುಣಗಳು ಎಲ್ಲರಿಗೂ ಮಾದರಿಯಾಗಿವೆ. ಪುನೀತ್ ರಾಜಕುಮಾರ್ ಅವರ ಅಕಾಲಿಕ ನಿಧನ ಸಮಸ್ತ ಚಿತ್ರರಂಗ ಮತ್ತು ಇಡೀ ಕನ್ನಡ ನಾಡಿಗೆ ತುಂಬಲಾರದ ನಷ್ಟವನ್ನುಂಟು ಮಾಡಿದೆ ಎಂದು ಕಂಬನಿ ಮಿಡಿದಿದ್ದಾರೆ.

ಪುನೀತ ರಾಜಕುಮಾರ್ ನಿಧನದಿಂದ ಅವರ ಕುಟುಂಬಕ್ಕೆ ಮತ್ತು ಅವರ ಅಭಿಮಾನಿ ಬಳಗಕ್ಕೆ ಆಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಅವರು ಪ್ರಾರ್ಥಿಸಿದ್ದಾರೆ.

## ಕೆಸಿಡಿ ವಿದ್ಯಾರ್ಥಿಗಳಿಂದ ಶ್ರದ್ಧಾಂಜಲಿ

**ಧಾರವಾಡ,ಅ.30:** ಪುನೀತ್ ರಾಜ್ ಕುಮಾರ್ ಕರ್ನಾಟಕ ಕಾಲೇಜು ಮೈದಾನದಲ್ಲಿ ನಡೆದ 'ಯುವರತ್ನ' ಚಿತ್ರೀಕರಣದ ಸಂದರ್ಭದಲ್ಲಿ ಲವಲವಿಕೆಯಿಂದ ಓಡಾಡುತ್ತಿದ್ದುದನ್ನು ಕಂಡು ಯುವಕರು ನೆಚ್ಚಿನ ನಟನಿಗೆ ಜಯಘೋಷ ಹಾಕುತ್ತಿದ್ದರು. ಆದರೆ, ಪುನೀತ್ ಹಠಾತ್ ನಿಧನದ ಸುದ್ದಿ ಅಭಿಮಾನಿಗಳಲ್ಲಿ ಅವರ ನಿಧನದ ಸುದ್ದಿ ಎಲ್ಲರನ್ನೂ ದಿಗ್ಭ್ರಮೆಗೊಳಿಸಿದೆ.

ಅಪ್ಪು ಅವರ ಕೊನೆಯ ಚಿತ್ರ ಚಿತ್ರೀಕರಣಗೊಂಡ ಧಾರವಾಡದ



ಕರ್ನಾಟಕ ಕಾಲೇಜ್ ಆವರಣದಲ್ಲಿ ಪರಿಸರ ಸ್ನೇಹಿ ಕಲಾವಿದ ಮಂಜುನಾಥ ಹಿರೇಮಠ ಅವರು ಹಾಗೂ ಕರ್ನಾಟಕ ಕಾಲೇಜಿನ ವಿದ್ಯಾರ್ಥಿಗಳು ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರಕ್ಕೆ ಹೂವು ಹಾಕಿ ಶ್ರದ್ಧಾಂಜಲಿ ಸಲ್ಲಿಸಿದರು.

## ಮೊಂಬತ್ತಿ ಬೆಳಗುವ ಮೂಲಕ ಶ್ರದ್ಧಾಂಜಲಿ

**ಧಾರವಾಡ,ಅ.30:** ದೇವರು ಪುನೀತ್ ರಾಜಕುಮಾರ್ ನಿಧನ ಹಿನ್ನೆಲೆಯಲ್ಲಿ ಅವರ ಕುಟುಂಬ ವರ್ಗಕ್ಕೆ ಹಾಗೂ ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸಿ ಜಯಕರ್ನಾಟಕ ಸಂಘಟನೆಯ ಧಾರವಾಡ ನಗರ ಧಾರವಾಡ ಜಿಲ್ಲಾ ಘಟಕ ವತಿಯಿಂದ ವಿವೇಕಾನಂದ ವೃತ್ತದಲ್ಲಿ ಮೊಂಬತ್ತಿ ಬೆಳಗುವ ಮೂಲಕ ಅವರ ಆತ್ಮಕ್ಕೆ ಶಾಂತಿಕೋರಿ ಒಂದು ನಿಮಿಷ ಮೌನ ಆಚರಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು.



ಈ ಸಂದರ್ಭದಲ್ಲಿ ಜಯಕರ್ನಾಟಕ ಸಂಘಟನೆಯ ಜಿಲ್ಲಾಧ್ಯಕ್ಷರಾದ ಸುಧೀರ್ ಎಂ ಮುಧೋಳ್, ಲಕ್ಷ್ಮಣ್. ಬಿ. ದೊಡಮನಿ, ಚಂದ್ರು ಅಂಗಡಿ, ಕರೆಪ್ಪ ಮಾಳಗಿಮನಿ, ಮಂಜುನಾಥ ಸುತ್ತುಗಟ್ಟಿ ಶ್ರೀಕಾಂತ್ ತಳವಾರ್, ವಿನಾಯಕ ಜಿಜಿ, ಎಂ ಬಿ ಎನ್ ಮಲ್ಲೂರ್, ನಾರಾಯಣ್ ಮಾದರ, ರಮೇಶ್ ಆರಳಿಕಟ್ಟಿ ಸುರೇಶಣ್ಣಾ ಹನುಮಂತ ಮೊರಾಬ್, ಪಂಚಯ್ಯ ಪೂಜಾರ್, ಮಂಜು ಜಾಲಗಾರ, ಮಂಜು ಅಮೀನಬಾವಿ, ಮುತ್ತು ಕುಲಕರ್ಣಿ, ಸಹದೇವ್, ಪ್ರೇಮ್, ಪ್ರವೀಣ್, ಗಣೇಶ್, ಗಿರೀಶ್, ಪರಶುರಾಮ್, ಸಂತೋಷ್, ಶ್ರೀ ಶೈಲ್, ಪ್ರೇಮ್ ಉಪಸ್ಥಿತರಿದ್ದರು.

ಈ ಸಂಜೆ Sat, 30 October 2021
https://epaper.eesanje.com/c/64058547